176	Bidar	Impts to Bidar – Chillargi MDR to Ashtoor, Dev Dev Vana via Malkapur	89.00
177	B'Kalyan	Impts: to Approach road from Attur to Belamgi	120.00
178	B'Kalyan	Impts: to road from Mirkhal to Wangarwadi	80.00
179	Humnabad	Impts; & Asphalting to Road from Hallikhed(K) to Chitakotta	85.00
		Total	**741.50**

ಕರ್ನಾಟಕ ವಿಧಾನಸಭೆ
13ನೇ ವಿಧಾನಸಭೆ
3ನೇ ಅಧಿವೇಶನ

220 ಶ್ರೀ.ಎಂ.ಟಿ.ಕೃಷ್ಣಪ್ಪ(ತುರುವೇಕೆರೆ)
ಮಾನ್ಯ ಲೋಕೋಪಯೋಗಿ ಸಚಿವರು)

ಅ) ಕೆಶಿಪ್ ಸಂಸ್ಥೆಯಡಿ ಕೆಶಿಪ್ 2ನೇ ಹಂತದ ಕಾಮಗಾರಿಗಳ ಪ್ರಸ್ತಾವನೆಗೆ ವಿಶ್ವಬ್ಯಾಂಕ್ ಅನುಮೋದನೆ ಪಡೆದುಕೊಳ್ಳಲಾಗಿದೆಯೇ (ಪೂರ್ಣ ವಿವರ ನೀಡುವುದು);

ಕೆಶಿಪ್–2 ರ ಯೋಜನೆಗೆ 300 ಮಿಲಿಯನ್ ಯುಎಸ್‌ಡಾಲರ್ (ಸುಮಾರು ರೂ.1500 ಕೋಟಿ) ಸಾಲದ ನೆರವನ್ನು ನೀಡಲು ವಿಶ್ವಬ್ಯಾಂಕ್ ತಾತ್ವಿಕವಾಗಿ ಒಪ್ಪಿರುತ್ತದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ವಿಶ್ವಬ್ಯಾಂಕ್‌ನೊಂದಿಗೆ ಕರಾರು ಪ್ರಕ್ರಿಯೆ ಬಾಕಿ ಇದೆ.

ಆ) ಸದರಿ ಯೋಜನೆಯ ರಸ್ತೆಗಳ ಉದ್ದ ಮತ್ತು ಕಾಮಗಾರಿಗಳ ಸಂಖ್ಯೆ ಎಷ್ಟು; ಈ ರಸ್ತೆಗಳ ಆಯ್ಕೆಯಲ್ಲಿ ಯಾವ ಮಾನದಂಡ ಉಪಯೋಗಿಸಲಾಗಿದೆ; ಇವುಗಳ ಒಟ್ಟು ಅಂದಾಜು ಮೊತ್ತ ಎಷ್ಟು; ವಿವರಗಳನ್ನು ಕಾಮಗಾರಿವಾರು ನೀಡುವುದು;

ಕೆಶಿಪ್–2ರ ರಡಿಯಲ್ಲಿ ಒಟ್ಟಾರೆ 3411 ಕಿ.ಮೀ. ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜಿಸಲಾಗಿದೆ. ಈ ರಸ್ತೆಗಳನ್ನು ವಿಶ್ವಬ್ಯಾಂಕ್‌ನ ಮಾರ್ಗಸೂಚಿ ಅನುಸಾರ ಅಧ್ಯಯನಗಳ ಮೂಲಕ ಆಯ್ಕೆ ಮಾಡಲಾಗಿದೆ. ಯೋಜನೆಯ ಒಟ್ಟು ಮೊತ್ತ ರೂ.9500 ಕೋಟಿ ಎಂದು ಅಂದಾಜಿಸಲಾಗಿದ್ದು ನಿಖರವಾದ ಮಾಹಿತಿಯು ಸಮಗ್ರ ಯೋಜನಾ ವರದಿ ಸಿದ್ಧಗೊಂಡ ನಂತರ ಲಭ್ಯವಾಗಲಿದೆ ಕಾಮಗಾರಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಮೇಲಿನ ಕಾಮಗಾರಿಗಳಿಗೆ ಕೇಂದ್ರ ಸರ್ಕಾರ ಮತ್ತು ವಿಶ್ವಬ್ಯಾಂಕ್ ಅನುಮತಿ ಪಡೆದುಕೊಂಡ ನಂತರ 2008–09, 2009–10 ಹಾಗೂ 2010–11

ಸಾಲಿನಲ್ಲಿ ತೆಗೆದುಕೊಳ್ಳಲು ನಿಯೋಜಿಸಲಾದ ಕಾಮಗಾರಿಗಳು ಹಾಗೂ ನಿಗಧಿಪಡಿಸಲಾದ ಹಣದ ವಿವರಗಳನ್ನು ನೀಡುವುದು;

ಕೆಶಿಪ್–2 ರ 3411 ಕಿ.ಮೀ.ಗಳ ರಸ್ತೆ ಅಭಿವೃದ್ಧಿಯ ಪೂರ್ಣ ಯೋಜನಾ ಮೊತ್ತಕ್ಕೆ ವಿಶ್ವ ಬ್ಯಾಂಕ್‌ನಿಂದ ನೆರವು ಕೋರಲಾಗಿತ್ತು. ಆದರೆ ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇರೆಗೆ ವಿಶ್ವ ಬ್ಯಾಂಕ್ 300 ಮಿಲಿಯನ್ ಯು.ಎಸ್.ಡಾಲರ್ ನೆರವು ನೀಡಲು ತಾತ್ವಿಕವಾಗಿ ಒಪ್ಪಿರುತ್ತದೆ. ಮೊದಲ ಹಂತದಲ್ಲಿ ವಿಶ್ವಬ್ಯಾಂಕ್ ನೆರವಿನಲ್ಲಿ 826 ಕಿ.ಮೀ. ರಸ್ತೆಗಳ ಅಭಿವೃದ್ಧಿಯನ್ನು 2400 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ.

ಈ) ಅನುಮೋದನೆ ನೀಡಿ ನಿಗಧಿಪಡಿಸಿದ ಕಾಮಗಾರಿಗಳನ್ನು ಬದಲಾವಣೆ ಮಾಡಿರುವ ಪ್ರಕರಣಗಳು ಇವೆಯೇ; ಈ ಬದಲಾವಣೆಗೆ ವಿಶ್ವಬ್ಯಾಂಕ್ ಅನುಮೋದನೆ ದೊರಕಿದೆಯೇ; ಇದ್ದಲ್ಲಿ ವಿವರಗಳನ್ನು ಒದಗಿಸುವುದು;

ಕೆಶಿಪ್–2 ರ ಅಡಿಯಲ್ಲಿ ಅಭಿವೃದ್ಧಿಗಾಗಿ ಈಗಾಗಲೇ ಸರ್ಕಾರದಿಂದ ಅನುಮೋದನೆಯಾಗಿರುವ 3411 ಕಿ.ಮೀ. ರಸ್ತೆಗಳ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.

ಉ) ಬದಲಾವಣೆ ಪ್ರಕ್ರಿಯೆಯಿಂದ ಕಾಲವ್ಯಯವಾಗಿ ನಿಗದಿಪಡಿಸಲಾದ ಅನುದಾನವನ್ನು ಬಳಕೆ ಮಡಲಾಗದೆ ವ್ಯಪಗತ ಆಗಿರುವುದು ನಿಜವೇ?

ಯೋಜನೆಗೆ ಇನ್ನೂ ವಿಶ್ವಬ್ಯಾಂಕ್‌ನೊಂದಿಗೆ ಕರಾರು ಮಾಡಿಕೊಳ್ಳುವ ಪ್ರಕ್ರಿಯೆ ಬಾಕಿ ಇದ್ದು ಕಾಲವ್ಯಯವಾಗಲಿ ಅಥವಾ ಅನುದಾನ ವ್ಯಪಗತವಾಗುವ ಪ್ರಮೇಯವಾಗಲಿ ಉದ್ಭವಿಸಿರುವುದಿಲ್ಲ.

ಸಂಖ್ಯೆ.ಲೋಇ/95/ಎಲ್‌ಎಕ್ಯೂ/ಇಎಪಿ/2009

(ಶ್ರೀ ಸಿ.ಎಂ.ಉದಾಸಿ)
ಲೋಕೋಪಯೋಗಿ ಸಚಿವರು

Annexure-1
Enclosure to GO No.PWD 61 EAP 2006 Bangalore Dated:25-11-2006

List of Selected roads for Improvements under KSHIP-II		
Sl. No.	**Name of the road**	**Length (Kms)**
01	Tinthini – Devadurga – Kalmala	74
02	Kushtagi(NH-13)-Tawargera-Sindhanur	64
03	Mangoli-Talikota-Devapur	110
04	Mudgal-Kudithini (NH-63)	115
05	konananur-Hunsur-HD Kote	89
06	Sira – AP Border via Madhugiri – Gowribidanur – Chikballapura – Chintamani – Srinivasapura –	210

	Mulbagal	
07	haliyal – Kudalasangama via Dharwad – Soundatti – Kamdurga – Badami – pattadakal – Kamatgi – NH13	243
08	hassan – Periyapatna via Arakalagud – Ramanathpura	77
09	Hirekeruru – Ranebennur (on NH-4)	58
10	Kudachi – Kabbur – Ghataprabha	50
11	Shikaripura – Aanandapuram (on NH-206)	32
12	Kotumachigi – Gajendragarh	32
13	Goa Border – Soundatti via Khanapur – Bagewadi – Bailhongal	133
14	Mudhol – Nippani via Mahalingapur – Kabbur	104
15	Belur – Kodlipet via Bikkodu – Vatchole – Alur – Magge	72
16	Davanagere – Birur via Channagiri	104
17	Gangamula – Kottigehara	63
18	hangal – haveri (NH-4)	32
19	TN Border (Hunasanahalli) – AP border via Kanakapura – Ramanagara – Magadi-Dobbespet – Koratagere – Madhugiri – Pavagada	220
20	Hole Narsipura to K. R. Nagar via Saligarama	46
21	Shelvadi – Harapanahalli via Gadag- Mundarigi	112
22	Indi – Zalaki (on NH-13)	20
23	Maharastra Border – Gulbarga via Afzalpur	99
24	Hungund – Talikot via Muddebihal	58
25	Gubbi – Mandya via Yediyur – Kowdle	109
26	Jagalur – NH-13	10
27	Hoskote – AP border via Chintamani	88
28	Belthangadi to Bantwal (on NH 48)	35
29	Ramangaram – Saligrama via Thalavadi-Choulanakuppe-Huliyurdurga-Nagamangala-K.R.pet Akkihebbal-Berya	142
30	malvalli – Koratagere via Maddur –Kuhigal – Tumkur	135
31	Shimoga – Tadasa on NH-4 via Savalanga via Shikaripura-Shiralakoppa-Togasi-Anvatti-Gondi-Hangal	171

32	Jamkhandi-Maharastra Border via Teradal – Kudachi – Managasuli	79
33	HoranAdu – Subramanya via Kalasa – Kottigehara-Mudigere-Sakaleshpura Junction-Vanagur	164
34	Molkalmur to SH 19 (KSHIP 1 Road)	6
35	Bidra – Chincholi via Ekhelli (NH9)	61
36	Padubidri – Karkala	28
37	Kollegal-Tamilnadu Border via Hanur-MM Hills	97
38	Virajpet – Somawarpet via Madikere	71
Total Length (Kms)		**3.411**

ಕರ್ನಾಟಕ ವಿಧಾನ ಸಭೆ

222 ಶ್ರೀ ನರಸಿಂಹ ನಾಯಕ (ರಾಜುಗೌಡ) (ಸುರಪುರ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾನ್ಯ ವಾರ್ತಾ ಸಚಿವರು

01) ರಾಜ್ಯದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಕಾರ್ಯನಿರತ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

2009–10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಮಟ್ಟದ ಪತ್ರಕರ್ತರು ವೃತ್ತಿ ಸಂಬಂಧಿ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಜಿಲ್ಲೆಯೊಳಗೆ ಪ್ರಯಾಣಕ್ಕೆ ಸೀಮಿತಗೊಳಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮೂಲಕ ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗುವುದು ಎಂದು ಘೋಷಿಸಲಾಗಿದೆ.

2) ಕ್ರಮ ಕೈಗೊಂಡಿದ್ದರೆ, ಯಾವ ಹಂತದಲ್ಲಿದೆ;

ಉಚಿತ ಬಸ್‌ಪಾಸ್ ಹಂಚಿಕೆ ಸಂಬಂಧ ತಗಲುವ ವೆಚ್ಚ ಮತ್ತು ಅನುರಾಸಬೆಕಾದ ವಿಧಾನಗಳ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಮಾಹಿತಿ ಪಡೆಲಾಗಿದ್ದು ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಕರ್ನಾಟಕ ವಿಧಾನ ಸಭೆ

223 ಶ್ರೀ ನರಸಿಂಹನಾಯಕ (ರಾಜುಗೌಡ) (ಸುರುಪುರ)

ಬಿ.ಎಸ್.ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಸುರಪುರ ತಾಲ್ಲೂಕಿನ ಬೊನ್ನಾಳದಲ್ಲಿ ಪಕ್ಷಿಧಾಮ ನಿರ್ಮಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;